ಎಸ್. ಸೂರ್ಯಪ್ರಕಾಶ ಪಂಡಿತ್

# ಅನ್ನವೇ ನಮಗೆ ಗುರು

ಒಮ್ಮೆ ಮುಲ್ಲಾ ನಸ್ರುದ್ದೀನ್ ಸಂಚಾರ ಮಾಡುತ್ತ ಮಾಡುತ್ತ ಯಾವುದೋ ಒಂದು ಗುಹೆಯ ಬಳಿಗೆ ತಲುಪಿದ. ಅಲ್ಲೊಬ್ಬ ಯೋಗಿ ಧ್ಯಾನದಲ್ಲಿದ್ದ. ಮುಲ್ಲಾನಿಗೆ ಕುತೂಹಲ ಉಂಟಾಯಿತು. ಆ ಯೋಗಿಯನ್ನು ಪ್ರಶ್ನಿಸಿದ: 'ಇಲ್ಲಿ ಏನು ಮಾಡುತ್ತಿದ್ದೀರಿ, ಗುರುಗಳೆ?'

'ಹುಡುಕಾಟದಲ್ಲಿರುವೆ' ಯೋಗಿ ಉತ್ತರಿಸಿದರು.

'ಯಾವುದರ ಹುಡುಕಾಟ?' ಪುನಃ ಪ್ರಶ್ನಿಸಿದ ಮುಲ್ಲಾ.

'ನಾನು ಪ್ರಾಣಿಗಳಿಂದ ಹಲವು ವಿದ್ಯೆಗಳನ್ನು ಕಲಿಯುತ್ತಿರುವೆ. ಅವನ್ನು ಬಳಸಿಕೊಂಡು ಮನುಷ್ಯನ ಜೀವನವನ್ನು ಹೇಗೆ ಪರಿವರ್ತನೆಗೊಳಿಸಿಕೊಳ್ಳಬಹುದು ಎನ್ನುವುದರ ಹುಡುಕಾಟದಲ್ಲಿದ್ದೇನೆ.'

'ಸ್ವಾಮಿ, ಹೌದು ಪ್ರಾಣಿಗಳಿಂದಲೂ ಕಲಿಯುವುದು ಬಹಳವಿದೆ. ಒಮ್ಮೆ ಮೀನೊಂದು ನನ್ನ ಪ್ರಾಣವನ್ನೇ ಉಳಿಸಿತ್ತು!' ಎಂದು ಉದ್ಗರಿಸಿದ ಮುಲ್ಲಾ.

ಈಗ ಆ ಯೋಗಿಗೆ ತುಂಬ ಕುತೂಹಲ ಮೂಡಿತು. 'ಅದು ಹೇಗೆ?' ಎಂದು ಪ್ರಶ್ನಿಸಿದ, ಕಣ್ಣನ್ನು ಅರಳಿಸಿಕೊಂಡು.

'ನಿಮಗೆ ಗೊತ್ತಿರುವ ಎಲ್ಲ ವಿದ್ಯೆಗಳನ್ನೂ ನನಗೆ ಕಲಿಸಿದರೆ ಆ ವಿಷಯವನ್ನು ನಿಮಗೆ ಹೇಳುವೆ' ಎಂದ ಮುಲ್ಲಾ.

ಮೀನಿನಂಥ ಜೀವಿ ಮಹಾತ್ಮನ ಪ್ರಾಣವನ್ನಷ್ಟೆ ಉಳಿಸಬಲ್ಲದು. ಹೀಗಾಗಿ ಆ ವಿಷಯವನ್ನು ನಾನು ತಿಳಿದುಕೊಳ್ಳಲೇಬೇಕು' ಎಂದು ಯೋಗಿ ಲೆಕ್ಕಾಚಾರ ಹಾಕಿದ. ಮುಲ್ಲಾನಿಗೆ ಎಲ್ಲ ವಿದ್ಯೆಗಳನ್ನೂ ಕಲಿಸಲು ಮುಂದಾದ.

ಹಲವು ವರ್ಷಗಳು ಉರುಳಿದವು; ಎಲ್ಲ ವಿದ್ಯೆಗಳನ್ನೂ ಮುಲ್ಲಾನಿಗೆ ಯೋಗಿ ಕಲಿಸಿದ. ಕೊನೆಯ ದಿನ ಕೇಳಿದ: 'ಮುಲ್ಲಾ, ನನಗೆ ಗೊತ್ತಿರುವ ಎಲ್ಲ ವಿದ್ಯೆಗಳನ್ನೂ ನಿನಗೆ ಧಾರೆ ಎರೆದಿರುವೆ. ಈಗ ಹೇಳು, ಮೀನು ನಿನ್ನ ಜೀವವನ್ನು ಉಳಿಸಿದ್ದಾದರೂ ಹೇಗೆ?'

ಮುಲ್ಲಾ ಮೆಲ್ಲಗೆ ಉಸುರಿದ: 'ಸ್ವಾಮಿಗಳೇ, ನಾನೊಮ್ಮೆ ಹಸಿವಿನಿಂದ ಇನ್ನೇನು ಸತ್ತೇಹೋಗುವಂಥ ಸ್ಥಿತಿಯನ್ನು ತಲುಪಿದ್ದೆ. ಆಗ ಮೀನೊಂದು ಸಿಕ್ಕಿತು. ಅದನ್ನು ತಿಂದ ನಾನು ಬದುಕಿಕೊಂಡೆ.'

★★★

**ನಮ್ಮ ನಿರೀಕ್ಷೆಗಳನ್ನು, ಹುಡುಕಾಟಗಳನ್ನು ಅಣಕಿಸುವಂತಿದೆ ಈ ಕಥೆ.**

**ಅಧ್ಯಾತ್ಮದ ಬಗ್ಗೆ ನಮ್ಮ ನಿರೀಕ್ಷೆಗಳು, ಊಹೆಗಳು ಎಷ್ಟೋ ಇರುತ್ತವೆ. ಇವು ಎಷ್ಟೋ ಬಾರಿ**